ಶ್ರೀ ಡಿ. ದೇವರಾಜ್‌ಅರಸ್.—ಗೂಂಡಾಗಳು ಯಾರು ವಿದ್ಯಾರ್ಥಿಗಳು ಯಾರು ಬೇರೆ ಯವರು ಯಾರು ಇದ್ದಾರೆ ಎನ್ನುವುದು ಗೊತ್ತಿಲ್ಲ ಈಗ 100ಕ್ಕೆ 90ರಷ್ಟು ಬಿಟ್ಟಿರುವುದು ಯಾರನ್ನು ಎಂದರೆ ವಿದ್ಯಾರ್ಥಿಗಳು ಮತ್ತು ಇತರರು ಅಂತ ಹೇಳಿದ್ದೇವೆ. 'ಇತರರು ಅಂತ ಇರುವವರನ್ನೂ ಕೂಡ ಬಿಟ್ಟುಬಿಟ್ಟಿದ್ದೇವೆ. ಆದುದರಿಂದ ಬರೀ ಗೂಂಡಾಗಳನ್ನು ಹಿಡಿಯುತ್ತಾರೆ ಎಂದು ಹೇಳು ವುದಕ್ಕಾಗುವುದಿಲ್ಲ. ನಾವು ಇಲ್ಲಿ ಕುಳಿತುಕೊಂಡು ಏನು ಬೇಕಾದರೂ ಹೇಳಬಹುದು. ದೊಂಬಿ ನಲ್ಲಿ ನುಗ್ಗಿದರೆ ಎಲ್ಲರನ್ನೂ ಹಿಡಿಯುತ್ತಾರೆ. Subseqseutly we come to know one is a student, one is a hawker, one is a goonda and one is a habitual offender. ಹೀಗಿರುವುದರಿಂದ ದೊಂಬಿಯಲ್ಲಿ ಹಿಡಿದಾಗ ಇಂಥಾವರು ಹೀಗೆ ಎನ್ನುವುದು ಅವರಿಗೆ ಹೇಗೆ ಗೊತ್ತಾಗಬೇಕು ? ಆದುದರಿಂದ ಮುಕ್ಕಾಲುಭಾಗ ಎಲ್ಲರನ್ನೂ ಬಿಟ್ಟಿದ್ದೇವೆ.

MADAM SPEAKER.—Now Question Hour is ovet.

QUESTION FOR ANSWERS ON THE DAY

(But not taken)

Drought Prone Area Programme in Tumkur District

304 Sri ANDANAIAH (Kanigal).—

Will the Minister for Community Develpment and Social Welfare be pleased to state.—

(*a*) whether they have introduced Drought Prone Area Pragramme in all the Taluks of Tumkur District ;

(*b*) if not, whether Government has any proposals before it to introduce the scheme in the remaining Taluks ?

Sri N. RACHAIAH (Minister for Community Developemt and social Welfare.—

(*a*) Nc. Drought Prone Area Programme is intoduced in only 4 Taluks of Tumkur District *viz.*, Sira, Madhugri, Koratagere and Parvagada.

(*b*) No. The Taluks have been selected on certain scintific criteria prescribed by the Government of India.

Colling Attenation to matter of urgent Publie Impartance :

(*i*) *re* : **Eviction of hutment at Saneguravanahalli, Bangalore North Taluk.**

9-30 A.M.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಧ್ಯಕ್ಷಣಿಯರೇ, ಸಾನೆ ಗೊರನ ಹಳ್ಳಿಯಲ್ಲಿರುವ ಗುಡಿಸಲು ವಾಸಿಗಳನ್ನು ಹೊರಹಾಕಿರುವ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

Sri N. HUTCHAMASTHY GOWDA (Minister for Revenue):—Sir, I beg to state as follows:

An extent of 1 77 Acres eight guntas of Gomal land bearing S.Nos. 3), 46 and 48 is available in Saneguruvanahalli Village, Yeswanthapur Hobli, Bangalore North Taluk, for being utilised for a public purpose. This land is adjacent to the City improvement Trust Board Lay-out (Rajajinagar) and is very valuable.

The Commissioner of Police has requested the Special Deputy Commissioner, Bangalore District, for the grant of the said entire extent of land in favour of the Police Department for construction of staff quarters for police Constables etc., in 1971 itself, Since there are several siteless, landless, poor persons in Saneguruvanahalli village and in the adjoining villages, the Special Deputy Commissioner recommended to Government on 4-10-72 that an extent of 85 acres and 8 guntas may be sanctioned to the Police Department for the said purpose and that the remaining extent of 30 acres be utilised for formation of sites and distribution in favour of siteless and landless persons. Several of the Associations, Industrialists and also individuals approached Government for assignment of this land. Instructions were issued to the local officers not not to assign any land and not to encourage unauthorised occupation by way of construction of huts and temporary Structures till the whole issue was examined by Government.

In the meanwhile, some well-to-do persons of Bangalore City had constructed about 200 huts on the said land with a view to establish possession over the land. The Assistant Commissioner, Bangalore Sub-Division who visited the said area found that 95 per cent of the said houses were vacant. He was therefore directed by the Deputy Commissioner to evict the persons. The said instructions were duly complied with on 11-10-72.

There was no encroachment on the said land for about 6 months since then. But subsequently during the last 6 months or so, 122 houses had again been constructed on the said land and the same were scattered almost over the entire extent of these Survey Numbers. About 80% of these huts were constructed by the un-deserving persons with the help of some middlemen who are reported to be collecting money from the poor and innocent persons promising them that sites would be got allotted. Some Peons and Attenders who were working in various Government departments had also put up huts. A retired Taluk Sheristedar who had also occupied two sites prompted persons to put up constructions and also collected money assuring them that he would bring Government order regarding the grant of site.

Since most of these constructions were unauthorised on Government land, which is required for a public purpose, instructions were issued to evict all these persons and the local officers have complied with these instructions. No house-hold articles or food-grains etc. have been taken away or confiscated by the local officers.

In Government Circular No. Rd 375 LGB 72 dated 3-2-73 instructions have been issued to provide alternative accommodation to the unauthorised occupants of Government land required for a public purpose. These instructions are not relevant in the particular case since the unauthorised occupants are not dwelling over this land for last saveral years nor are they homeless persons. The encroachment is of a very recent origin and is a deliberate one to establish possession over Government land and force Government for a decision in their favour by way of assignment.

The action taken by the local officers is in conformity with the instructions issued by Government.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೇ, ಮಾನ್ಯ ಮಂತ್ರಿಗಳು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಅದರಲ್ಲಿ 23ನೇ ತಾರೀಖು ಎವಿಕ್ಷನ್ ಮಾಡಿಸಿದ್ದೇವೆಂದು ಹೇಳಿದ್ದಾರೆ. ಆದರಲ್ಲಿ ಅಲ್ಲಿ ನಡೆದಿರುವಂಥ ಘಟನೆಯೇ ಬೇರೆ, ಅದನ್ನು ಮರೆ ಮಾಡುವುದಕ್ಕೆ ನಿಮ್ಮ ಅಧಿಕಾರಿಗಳು ಪ್ರಯತ್ನ ಮಾಡುತ್ತಿದ್ದಾರೆಂದು ನನ್ನ ಅಭಿಪ್ರಾಯ. ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆಯೇ? ಹಾಗೂ ಮಾನ್ಯ ಮಂತ್ರಿಗಳ ಸ್ಟೇಟ್‌ಮೆಂಟ್‌ನಲ್ಲಿ ಶ್ರೀಮಂತ ವರ್ಗವರಿದ್ದಾರೆಂದು ಹೇಳಿದ್ದಾರೆ. ಅದು ಬಹುಶಃ ಸತ್ಯಕ್ಕೆ ದೂರವಾದ ಮಾತು. ಆದುದರಿಂದ ಇದರ ಮೇಲೆ ಮತ್ತೆ ನಾವು ಚರ್ಚೆ ಮಾಡಬೇಕಾಗುತ್ತದೆ. ಅಲ್ಲಿರುವ ಸನ್ನಿವೇಶವೇ ಬೇರೆ, ಇಲ್ಲಿ ಮಂತ್ರಿಗಳು ಹೇಳಿಕೆ ಕೊಟ್ಟಿರುವುದೇ ಇನ್ನೊಂದು ಆಗಿದೆ.

ಇವತ್ತು ಯಾರಿಗೆ ನಿವೇಶನವಿಲ್ಲ, ಅಥವಾ ಮನೆ ಇಲ್ಲ ಅಂಥವರೇ ಸಾನೇ ಗುರುವನ ಹಳ್ಳಿಯಲ್ಲಿ ಮನೆ ಕಟ್ಟಿಕೊಂಡಿರುವುದು. ಇವತ್ತು ಯಾವ ಪ್ರಾಪರ್ಟಿ ನಿವೇಶನ ಮತ್ತೊಂದು ಮಗ ದೊಂಡೂ ಏನೂ ಇಲ್ಲದೇ ಇರತಕ್ಕಂಥ ಬಡವರು ಯಾರು ಅಲ್ಲಿದ್ದಾರೆ ಅವರಿಗೆ ಜಕ್ಕೆ ಸ್ಟೆಟ್‌ಗಳನ್ನು ಕೊಡಬಾರದು?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ಈ ವಿಷಯ ಗೊತ್ತಾದದ್ದು ಕಳೆದ ವರ್ಷ ಡಿಸೆಂಬರ್ ತಿಂಗಳಿನಲ್ಲಿ. 31ನೇ ತಾರೀಖು ಡಿಸೆಂಬರ್ 19 4 ರಂದು ನಾನು ಅಲ್ಲಿಗೆ ನುಪಾರು ಬೆಳಿಗ್ಗೆ 8-9 ಗಂಟೆಯ ಸಮಾಯದಲ್ಲಿ ಹೋಗಿ ನೋಡಿದಾಗ ಮುಕ್ಕಾಲು ಭಾಗ ಮನೆಗಳು ಖಾಲಿ ಇದ್ದವು. ನುಮ್ಮನ್ನೇ ಗುಡಿಸಲುಗಳನ್ನು ಕಟ್ಟಿಕೊಂಡಿದ್ದರು. ಅಲ್ಲಿ ಯಾರೂ ವಾಸ ಮಾಡುತ್ತಾ ಇರಲಿಲ್ಲ. ಆದರೆ ಕೆಲವರು ಮಾತ್ರ ಅಲ್ಲಿಯೇ ಇದ್ದರು. ಅವರಲ್ಲಿ ಒಬ್ಬ ರಿಜ್ಯೆರ್ ಸಿರಸ್ತೇದಾರರು, ಅಲ್ಲಿ ವಾಸ ಮಾಡುತ್ತಾ ಇರತಕ್ಕಂಥರವರೆಲ್ಲರಿಂದಲೂ ನಿಮಗೆ ಸ್ಟೆಟ್ಸ್ ಕೊಡಿಸುತ್ತೇನೆ ದುಡ್ಡು ಕೊಡಿ ಎಂದು ಹೇಳಿ, ದುಡ್ಡನ್ನು ತೆಗೆದುಕೊಂಡಿದ್ದಾರೆಂಬುದು ಗೊತ್ತಾಯಿತು. ಇವರು ಸರ್ಕಾರಿ ನಿವೃತ್ತ ನೌಕರರು, ಇವರ ಇಬ್ಬರು ಮಕ್ಕಳೂ ಸರ್ಕಾರಿ ಕಾರ್ಯನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರನ್ನು ಬಿಟ್ಟು ಬಾಕಿ ಉಳಿದವರು ಯಾರು ಬಡವರಿದ್ದಾರೆ, ಯಾರು ಜಮೀನು, ಮನೆ ಇಲ್ಲದಂಥವರು ಎಷ್ಟು ಜನ ಇದ್ದಾರೆ ಅವರ ಲೆಕ್ಕವನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಮತ್ತು ಸಾನೇಗೊರನ ಹಳ್ಳಿ, ಕಾವಾಡೆ ಪಾಳ್ಯ ಮತ್ತು ಅದರ ಹತ್ತಿರವಿರುವ ಗ್ರಾಮಗಳಲ್ಲಿ ಮನೆ, ಜಮೀನು ಇಲ್ಲದಂಥವರು ಎಷ್ಟು ಜನರಿದ್ದಾರೆ ಅವರ ಸಂಖ್ಯೆಯನ್ನು ತೆಗೆದುಕೊಳ್ಳಿ ಎಂದು ಸಹ ತಿಳಿಸಿದ್ದೇವೆ. ಹಾಗೂ ಗೌವರ್ನಮೆಂಟ್ ಸರ್ವೆಂಟ್ಸ್ ಯಾರು ಸ್ಟೆಟ್ಸ್ ಇಲ್ಲದೇನೆ ಇದ್ದಾರೆ ಅವರ ಸಂಖ್ಯೆಯನ್ನು ಸಹ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ನಾವು ಸ್ಟೆಟ್ಸ್‌ನ್ನು ವಿಂಗಡಣೆ ಮಾಡುವಾಗ ಯಾರು "ಒಳ್ಳೆಯ ಸ್ಥಿತಿವಂತರು ಮತ್ತು ನಿವೃತ್ತ ಸರ್ಕಾರಿ ನೌಕರರು" ಅಕ್ರಮವಾಗಿ ಮನೆಗಳನ್ನು ಕಟ್ಟಿಸಿದ್ದಾರೆ ಅಂಥವರನ್ನು ಬಿಟ್ಟು ಬಾಕಿ ಉಳಿದವರಿಗೆ ಎಷ್ಟು ಸ್ಟೆಟ್ಸ್‌ಗಳನ್ನು ಕೊಡಲು ಸಾಧ್ಯವೋ ಅಷ್ಟನ್ನು ಕೊಡೋಣವೆಂದು ತಿಳಿಸಿದ್ದೇವೆ. ಅಕ್ರಮವಾಗಿ ಅಲ್ಲಿ ಮನೆಗಳನ್ನು ಕಟ್ಟಿಸಿದಂಥವರನ್ನು ಎವಿಕ್ಟ್ ಮಾಡಿಸಿದ ಮೇಲೆ ಪುನಃ ಅದೇ ಜಾಗದಲ್ಲಿ ವಾಸ ಕೆಲವರು ಹೋಗಿ ಸೇರಿಸಿಕೊಂಡಿದ್ದಾರೆ. ಇತ್ತೀಚೆಗೆ ನಾನು ಅಲ್ಲಿಗೆ ಹೋಗಿ ನೋಡಿಲ್ಲ. ಈ ಗಮನ ಸೆಳೆಯುವ ಸೂಚನೆ ಮಾನ್ಯ ದೇವೇಗೌಡರು ಮಿತ್ರರ ಸ್ನೇಹಿತರಿಂದ ಬಂದಕೂಡಲೇ ನಾನು ಅಲ್ಲಿಗೆ ಹೋಗಿ ನೋಡಲು ಆಗ ಇದ್ದುದಕ್ಕಾಗಿ, ಡಿವಿಜನಲ್ ಕಮೀಷನರ್‌ರವರೇ ಖುದ್ದಾಗಿ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಮೇಲೆಯೇ ಈ ವರದಿಯನ್ನು ನಮಗೆ ಅವರು ಕಳುಹಿಸಿಕೊಟ್ಟಿದ್ದಾರೆ.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ನನ್ನ ಹೇಳಿಕೆಯಲ್ಲಿ ಹೇಳಿರುವ ಹಾಗೆ, ಪೋಲೀಸ್ ಕ್ವಾರ್ಟರ್ಸ್‌ಗೆ ಕೊಡತಕ್ಕದ್ದಾಗಲೀ ಆಸ್ಪತ್ರೆಗೆ ಸ್ಥಳ ಮತ್ತು ಹೌಸ್‌ಲೆಸ್, ಮತ್ತು ಆ ಜಮೀನು ಯಾವ ಊರಿಗೆ ಸಂಬಂಧಪಟ್ಟಿದ್ದು ಆ ಜನರಿಗೆ ಕೊಡತಕ್ಕದಾಗಲೀ ಎಷ್ಟು ಎನ್ನುವುದನ್ನು ನಿರ್ಣಯ ಮಾಡಿ ಆಸ್ಪತ್ರೆಗೆ ಜನರಿಗೆ ಫ್ರಿಫರೆನ್ಸ್ ಕೊಡಬೇಕಾಗುತ್ತದೆ. ಇದನ್ನೆಲ್ಲಾ ಆಲೋಚನೆ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಸೈಟು ಇಲ್ಲದೆ ಇರತಕ್ಕವರಿಗೆ ಈ 30 ಎಕರೆ ಜಮೀನನ್ನು ಕೊಡಬೇಕು ಎಂದು ತಾವು 1971ನೇ ಇಸವಿಯಲ್ಲಿ ನಿರ್ದೇಶನವನ್ನು ಕೊಟ್ಟಿದ್ದೀರಿ. ಇಲ್ಲಿಯವರೆಗೂ ಕೂಡ ಯಾವ ತರಹದ ಕ್ರಮವನ್ನು ತೆಗೆದುಕೊಳ್ಳದೇ ಇರುವುದರಿಂದ, ನಿಜವಾಗಿ ಯಾರಿಗೆ ಸೈಟ್‌ಗಳನ್ನು ಕೊಡಬೇಕೋ ಅವರಿಗೆ ಕೊಡದೆ ಬೇರೆಯವರು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ತಾವು 1971ನೇ ಇಸವಿಯಿಂದಲೂ ಇವರಿಗೆ ಸೈಟುಗಳನ್ನು ಕೊಡುವುದಕ್ಕೆ ಏಕೆ ಪ್ರಯತ್ನ ಮಾಡಲಿಲ್ಲ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—1972ನೇ ಇಸವಿಯಲ್ಲಿ ಪರಿವರ್ತಿತ ಸಚಿವರು ಒಂದು ಸಾರಿ ಆ ಸ್ಥಳಕ್ಕೆ ಭೇಟಿ ನೀಡಿ ಆ ಸೈಟುಗಳನ್ನು ಯಾರು ಯಾರಿಗೆ ಕೊಡಬೇಕು ಎಂಬುದನ್ನೆಲ್ಲಾ ಆಲೋಚನೆ ಮಾಡಿ ಇವಕ್ಕೆ ಒಂದು ಸ್ಪೆಷಲ್ ಆರ್ಡರ್ ಕೂಡ ಕೊಟ್ಟಿದ್ದರು. ಸ್ಪೆಷಲ್ ಆರ್ಡರ್ ಇನ್ನೂ ವೇಕೇಟ್ ಆಗಿಲ್ಲ. ಮತ್ತೆ ಅವರು ಕೊಟ್ಟಿರತಕ್ಕದ್ದು ಸಂಬಂಧಪಟ್ಟ ಖಾತೆಯ ಮಂತ್ರಿಗಳಿಗೆ ಅಲ್ಲದೆ ಇದ್ದುದರಿಂದ ಅವರು ಸ್ಪೆಷಲ್ ಅನ್ನು ವೇಕೇಟ್ ಮಾಡಬೇಕು ಎಂದು ಡಿ.ಸಿ.ಯವರ ಮುಖಾಂತರ ಮನವಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅದು ವೇಕೇಟ್ ಆಗಬೇಕು. ಆದಾದಮೇಲೆ ಪೋಲೀಸ್ ಕ್ವಾರ್ಟರ್ಸ್‌ಗೆ ಎಷ್ಟು ಜಮೀನು ಕೊಡಬೇಕೋ ಅಷ್ಟು ಕೊಟ್ಟು ಉಳಿದಿದ್ದನ್ನು ಆದಷ್ಟು ಬೇಗ ತೀರ್ಮಾನ ಮಾಡದೇ ಇದ್ದುದರಿಂದ ಈ ಅಕ್ರಮ ಪ್ರವೇಶಕ್ಕೆ ಕಾರಣ ಎನ್ನುವುದನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಯು. ಟಿ. ಫರೀದ್.—ಅಲ್ಲಿ ಮನೆಯಲ್ಲಿದ್ದವರು, ಬಡವರು, ಇದ್ದಾರೆ. ನನಗೆ ತಿಳಿದ ಮಟ್ಟಿಗೆ ಅಂಥವರ ಸಾಮಾನುಗಳನ್ನು ಬೇರೆಯವರು ಲೂಟಿ ಮಾಡಿದ್ದಾರೆ. ಆದ್ದರಿಂದ ತಾವು ಲೂಟಿ ಮಾಡಿದ್ದಾರೆ ಎನ್ನುವುದನ್ನು ತನಿಖೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೀರಾ? ಮತ್ತು ಸೈಟ್ಸ್ ಮಾಡುವ ಮೊದಲು ಯಾರಿಗೆ ಸೈಟ್ ಕೊಡಬೇಕು ಯಾರಿಗೆ ಕೊಡಬಾರದು ಎನ್ನುವ ತೀರ್ಮಾನ ತೆಗೆದುಕೊಂಡು ಆಮೇಲೆ ಉಳಿದವರಿಗೆ ಸೈಟ್ಸ್ ಕೊಡುವ ಯೋಚನೆ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬೇರೆಯವರು ಆ ಸ್ಥಳದಲ್ಲಿ ಲೂಟಿಮಾಡಿದ್ದಾರೆ ಎನ್ನುವುದಾಗಲೀ ಅಥವಾ ಇವರನ್ನು ಎವಿಕ್ಟ್ ಮಾಡುವಾಗ ಅವರ ಸಾಮಾನುಗಳನ್ನೆಲ್ಲಾ ದೋಚಿಕೊಂಡಿದ್ದಾರೆಯನ್ನುವುದಾಗಲೀ, ಸತ್ಯಕ್ಕೆ ದೂರವಾದಂಥ ಮಾತು. ಅವರನ್ನು ಎವಿಕ್ಟ್ ಮಾಡುತ್ತಿದ್ದಂಥ ಕಾಲದಲ್ಲಿ ಪೋಲೀಸ್ ಅಧಿಕಾರಿಗಳು ಇದ್ದರು, ಪೋಲೀಸ್ ಅಧಿಕಾರಿಗಳ ಸಮಕ್ಷಮ' ಅವರನ್ನು ಎವಿಕ್ಟ್ ಮಾಡಿಸಿದೆ. ಅವರ ಸಾಮಾನುಗಳನ್ನು ಅಧಿಕಾರಿಗಳು ದೋಚಿಕೊಂಡು ಹೋಗಿದ್ದಾರೆ ಎನ್ನುವುದರಲ್ಲಿ ಸತ್ಯಾಂಶವಿಲ್ಲ. ಮಾನ್ಯ ಸದಸ್ಯರು ಹೇಳಿರುವ ಹಾಗೆ, ಪೋಲೀಸ್ ಕ್ವಾರ್ಟರ್ಸ್‌ಗೆ ಎಷ್ಟು ಕೊಡಬೇಕೋ ಅಷ್ಟು ಜಮೀನು ಕೊಟ್ಟು ಸ್ಥಳ ವಜಾ ಯಾರು ಯಾರಿಗೆ ಸೈಟು ಇಲ್ಲ, ಅವರಿಗೆ ಕೊಡಬೇಕು, ಇದರ ಬಗ್ಗೆ ಬೇಗ ತೀರ್ಮಾನ ಮಾಡಿದರೆ ಇದು ಬಗೆ ಹರಿಯುತ್ತದೆ ಎನ್ನುವ ಭಾವನೆ ಇದೆ.

ಶ್ರೀ ಪಿ. ಡಿ. ಬಂಗೇರ.—ತಾವು 30-11-1972ನೇ ತಾರೀಖಿನ ದಿವಸ, ಇದರ ಬಗ್ಗೆ ಅಧಿಕಾರಿಗಳಿಗೆ ಪರಿಶೀಲಿಸಿ ರಿಪೋರ್ಟ್ ಕೊಡಬೇಕು ಮತ್ತು ಅಲ್ಲಿ ಅವರು ಬೆಳೆದಿರುವ ಕಾಯಿ ಪಲ್ಯಗಳನ್ನು ಎತ್ತಿ ಬಿಸಾಡಬೇಕು ಎಂದು ಆರ್ಡರ್ ಕೊಟ್ಟಿದ್ದೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಹೋದ ದಿವಸ ಶಾಕರು ಯಾರು ಬಂದಿರಲಿಲ್ಲ. ಅಧಿಕಾರಿಗಳು ಇದ್ದರು. ಅಲ್ಲಿ ಕಾಯಿಪಲ್ಯವನ್ನು ಬೆಳೆದಿರುವವರು ಯಾರೂ ಇಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ. ಒಂದು ಭಾಗವಲ್ಲಿ ಬೇಲಿ ಹಾಕಿಕೊಂಡು ಒಬ್ಬರು ಮಾತ್ರ ಬೆಳೆದಿದ್ದಾರೆ. ನಾನು ಕಾಯಿಪಲ್ಯ ಕಿತ್ತುಹಾಕಿ, ಮನೆಯನ್ನು ಲೂಟಿ ಮಾಡಿ ಎಂದು ಹೇಳಲಿಲ್ಲ. ಯಾರು ಯಾರು ಅಕ್ರಮವಾಗಿ ಜಾಗವನ್ನು ವಶಪಡಿಸಿಕೊಂಡಿದ್ದಾರೆ ಅಂಥವರಲ್ಲಿ ಯಾರಿಗೆ ಅರ್ಹತೆ ಇದೆ, ಯಾರಿಗೆ ಅರ್ಹತೆಯಿಲ್ಲ ಎನ್ನುವುದನ್ನು ಆಲೋಚನೆ ಮಾಡಿ ಜಾಗಗಳನ್ನು ಕೊಡಬೇಕು ಎಂದು ಹೇಳಿದ್ದೇನೆ.

ಶ್ರೀ ಬಿ.ವಿ. ಕಕ್ಕಿಲಾಯ.—ಗವರ್ನಮೆಂಟ್ ಸರ್ಕ್ಯುಲರ್ ನಂ.ಆರ್.ಡಿ. 375 ಎಲ್.ಜಿ.ಜಿ. 72 ದಿನಾಂಕ 3-2-1973 ಇದರಲ್ಲಿ ಕೊನೆಯ ಪ್ಯಾರಾದಲ್ಲಿ ಈ ರೀತಿ ಹೇಳಿದ್ದೀರಿ:— If the majority ef these are landless workers they may be provided sites under the scheme sanctioned by Government" ಎಂದು. ಈ ರೀತಿ ಸರ್ಕಾರದ ಜಮೀನಿನಲ್ಲಿ ಯಾರು ಅಕ್ರಮವಾಗಿ ವಾಸಮಾಡಿಕೊಂಡಿದ್ದಾರೆ ಅಂಥವರಲ್ಲಿ ಮನೆಯಿಲ್ಲದ್ದವರಿಗೆ, ಜಮೀನು ಇಲ್ಲದವರಿಗೆ ಜಾಗವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇವರಿಗೆ ಆಲ್ಟರನೇಟಿವ್ ಸೈಟ್ಸ್ ಕೊಡಬೇಕು ಎಂದು ಸೂಚನೆಯನ್ನು ಕೊಟ್ಟಿದ್ದೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಈಗಾಗಲೇ ಹೇಳಿದ್ದೇನೆ. ಪೋಲೀಸ್ ಕ್ವಾರ್ಟರ್ಸ್‌ಗೆ ಎಷ್ಟು ಕೊಡಬೇಕೋ ಅದನ್ನು ಕೊಟ್ಟು ಉಳಿದ ಜಾಗವನ್ನು, ಇದರಲ್ಲಿ ಅರ್ಹರಾದ ವರು ಯಾರಿದ್ದಾರೆ, ಎನ್ನುವ ಹಿನ್ನೆಲೆಯಲ್ಲಿ ಜಾಗವನ್ನು ಕೊಡತಕ್ಕದ್ದು. ಆದಷ್ಟು ಬೇಗ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

Sri B. SUBBAIAH SETTY.—From the statement made by the Hon. Minister it is admitted that there are siteless and poor people. Will the Government give a categorical assurance that in conformity with the circular issued by the Government which is quoted in the statement, the House sites will be allotted to the Houseless occupants there ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಹೇಳಿದ್ದನ್ನೇ ಮತ್ತೆ ಹೇಳಬೇಕಾಗುತ್ತದೆ. ಮೊದಲು ಪೋಲೀಸ್ ಕ್ವಾರ್ಟರ್ಸ್‌ಗೆ ಕೊಡಬೇಕಾದ ಜಮೀನು ಕೊಟ್ಟು ಈ ಜಮೀನು ಯಾವ ಯಾವ ಊರಿಗೆ ಸಂಬಂಧಪಟ್ಟಿದ್ದು, ಅಲ್ಲಿರತಕ್ಕ ಹರಿಜನರ್ ಮತ್ತು ಸ್ಕೆಟಲೆಸ್ ಜನರಿಗೆ ಎಷ್ಟು ಜಮೀನು ಬೇಕಾಗುತ್ತದೆ, ಅದಾದಮೇಲೆ ಸಂಬಂಧಪಟ್ಟ ಊರಿನವರು ಆ ಸ್ಥಳದಲ್ಲಿ ಯಾರು ಯಾರು ಇದ್ದಾರೆ, ಅವರಲ್ಲಿ ಅರ್ಹತೆ ಯಾರಿಗೆ ಇದೆ, ಇದನ್ನೆಲ್ಲಾ ನೋಡಿಕೊಂಡು ಕೊಡತಕ್ಕದ್ದು ಇದೆ. ಅಮೇಲೆ, ಕ್ಲಾಸ್ 4 ಸರ್ಕಾರಿ ನೌಕರರು ಈ ಜಾಗಗಳಿಗೆ ಅರ್ಜಿಯನ್ನು ಹಾಕಿಕೊಂಡಿದ್ದಾರೆ. ನನಗೆ ತಿಳಿದ ಪ್ರಕಾರ 10,687 ಅರ್ಜಿಗಳು ಈ ಜಾಗಗಳಿಗಾಗಿ ಬಂದಿವೆ. ಅನೇಕರು ಜನರಿಗೆ ಪ್ರೋತ್ಸಾಹ ಕೊಟ್ಟು ಅರ್ಜಿಯನ್ನು ಹಾಕಿಸಿ ದುಡ್ಡನ್ನು ತೆಗೆದುಕೊಂಡಿರುವ ನಿದರ್ಶನ ಗಳು ನಮ್ಮ ಗಮನಕ್ಕೆ ಬಂದಿವೆ. ಯಾರಿಗೆ ಜಾಗಗಳನ್ನು ಕೊಡಬೇಕು, ಯಾರಿಗೆ ಕೊಡುವುದು ಸೂಕ್ತ ಎನ್ನುವುದನ್ನು ಆಲೋಚನೆ ಮಾಡಿ ಬೇಗ ತೀರ್ಮಾನ ಕೈಗೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರುವ ಪ್ರಕಾರ ಇವರಿಗೆ ಜಾಗ ಕೊಡಬಾರದು ಎನ್ನುವ ನಿರ್ಣಯ ಮಾಡಿಕೊಂಡಿದ್ದಾರೆ ಎನ್ನುವುದು ಗೊತ್ತಾಯಿತು. ಪೋಲೀಸ್ ಕ್ವಾರ್ಟರ್ಸ್‌ಗೆ ಎಷ್ಟು ಜಮೀನು ಕೊಡಬೇಕೋ ಅಷ್ಟು ಕೊಟ್ಟು ನಾಲ್ಕನೆ ದರ್ಜೆಯ ನೌಕರರಿಗೆ ಎಷ್ಟು ಕೊಡಬೇಕೋ ಅಷ್ಟು ಕೊಟ್ಟು ಅದಾದಮೇಲೆ ಆ ಊರಿಗೆ ಸಂಬಂಧಪಟ್ಟವರಿದ್ದರೆ ಅವರಿಗೆ ಕೊಟ್ಟು, ಅಮೇಲೆ ಉಳಿದವರಿಗೆ ಯೋಚನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಬಹುಶಃ ನಿಮ್ಮ ಹೇಳಿಕೆಯ ಪ್ರಕಾರ ಪೋಲೀಸ್ ಕ್ವಾರ್ಟರ್ಸ್ ಕಟ್ಟುವುದು ಬಹಳ ಪ್ರಾಮುಖ್ಯವಾದದು, ನಾಲ್ಕನೆ ದರ್ಜೆಯ ನೌಕರರಿಗೆ ಜಾಗ ಕೊಡುವುದು ಪ್ರಾಮುಖ್ಯವಾದದು. ಅಲ್ಲಿರುವ ಹೆಚ್ಚಿನ ಬಡವರು ಎಲ್ಲಿಗೆ ಹೋಗಬೇಕು ? ಇದನ್ನೆಲ್ಲಾ ಮಾತನಾಡುವುದಕ್ಕೆ ನಾನು ಬೇರೆ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯಸದ್ಯಸರು ಬೇರೆ ಅವಕಾಶವನ್ನು ಉಪಯೋಗಿಸಿಕೊಳ್ಳುವುದಾದರೆ ಆ ರೀತಿ ಮಾಡಬಹುದು ಈಗ ಮುಂದಿನ ವಿಷಯಕ್ಕೆ ಹೋಗೋಣ.

(*ii*) *re*: **Orders to Stop all allotment of Houses**

Sri B. PUTTASWAMAIAH.—I call the attention of the Minister for Law and Municipal Administration to the reported order of Government to the Chairman of City improvement Trust Board to stop all allotment of Houses.